# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.
# ಎಸ್.ಸಿ. ನಂಃ 29/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ನೂರ್ ಜಾನ್ | ಪ್ರಾಸಾಃ | 03 |
| **ಗಂಡನ ಹೆಸರುಃ** | ಹಿಮಾಮ್ ಸಾಬ್ | ಚಾಸಾಃ | 03 |
| **ವಯಸ್ಸುಃ** | 45 | ಪ್ರಮಾಣ ವಚನ ಭೋದಿಸಿದ ದಿನಾಂಕ: | 12-08-2025 |
| **ಉದ್ಯೋಗಃ** | ಖಾಸಗಿ | | |
| **ವಾಸ ಸ್ಥಳಃ** | ಚಿಂತಾಮಣಿ | | |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-*1* ನನ್ನ ಮಗಳು. ನನಗೆ ಆರೋಪಿ ಗೊತ್ತಿಲ್ಲ. ಕೌನ್ಸಿಲರ್ ಸಾಧೀಕ್ ಎಂಬಾತ ಈ ಕೇಸು ಕೊಡಿಸಿದ್ದಾನೆ. ಆರೋಪಿ ನನ್ನ ಮಗಳನ್ನು ಕರೆದುಕೊಂಡು ಹೋಗಿ ಗಲಾಟೆ ಮಾಡಿದ್ದ ಎಂದು ಈ ಕೇಸು ಕೊಡಿಸಿದ್ದೇವೆ. ನನ್ನ ಮಗಳನ್ನು ತಿರುಪತಿ , ಬೆಂಗಳೂರಿಗೆ ಕರೆದುಕೊಂಡು ಹೋಗಿ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದ. *20* ದಿನಗಳ ನಂತರ ಮಗಳು ಹಿಂದಿರುಗಿ ಬಂದಿದ್ದಳು. ನನ್ನ ಮಗಳು ನನ್ನ ಬಳಿ ಚೇಳೂರಿನ ಲಾಡ್ಜ್‌ನಲ್ಲ್, ಬೆಂಗಳೂರು, ತಿರುಪತಿ ಎಲ್ಲಾ ಕಡೆ ಕರೆದುಕೊಂಡು ಹೋಗಿ ಆಕೆಯ ಮೇಲೆ ಬಲವಾಂತವಾದ ಲೈಂಗಿಕ ಕ್ರಿಯೆ ನಡೆಸಿದ್ದ ಎಂದು ಹೇಳಿದ್ದಳು. ಆರೋಪಿ ಆತನ ಸ್ನೇಹಿತನ ಮನೆಯಲಲ್ *20* ದಿನ ಇಟ್ಟುಕೊಂಡಿದ್ದ. ನಂತರ ಆಕೆಯ ಮೇಲೆ ಹಲ್ಲೆ ಮಾಡಿ ಬೆಂಗಳೂರಿನಲ್ಲಿ ಬಿಟ್ಟು ಬಂದಿದ್ದ. ಆರೋಪಿಯ ಸ್ನೇಹಿತರು ನನ್ನ ಮಗ ಚಾಸಾ-*4* ರ ವರಿಗೆ ಪೋನ್ ಮಾಡಿದ್ದು ಅಲ್ಲಿಂದ ಆಕೆಯನ್ನು ಕರೆ ತಂದಿದ್ದರು. ನನ್ನ

ಮಗಳು ಬಂದಾಗ ಆಕೆಯ ಕುತ್ತಿಗೆಯ ಬಳಿ ಪೆಟ್ಟಾಗಿದ್ದು , ಆಕೆಗೆ ಚಿಕಿತ್ಸೆ ಕೊಡಿಸಿದ್ದವು. ಆಕೆಗೆ ಸಿಗರೇಟ್ ನಿಂದ *2* ಕೈ ಗಳ ಮೇಲೆ ಸುಟ್ಟಿದ್ದ. ಈ ಬಗ್ಗೆ ಪೋಲಿಸರಲ್ಲಿ ಹೇಳಿಕೆ ನೀಡಿದ್ದೇನೆ. ನಂತರ ಠಾಣೆಯಲ್ಲ್ ಆರೋಪಿಯನ್ನು ನೋಡಿದ್ದೆ. ಆತನನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿ ಗೈರು ಹಾಜರಾಗಿದ್ದು ಗುರುತಿಸುವಿಕೆ ತಕರಾರು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ವಿ ಆರ್ ವಕೀಲರಿಂದ ಪಾಟೀ ಸವಾಲು</u>**

ನನ್ನ ಮಗಳು ನನಗೆ ಎಲ್ಲಾ ವಿಚಾರಗಳನ್ನು ಹೇಳಿದ್ದಾಳೆ ಎಂದರೆ ಸರಿ. ನನ್ನ ಮಗಳು 2 ನೇ ವರ್ಷದ ಪದವಿ ಓದುತ್ತಿದ್ದಳು. ಆಕೆ ವಿದ್ಯಾಭ್ಯಾಸದಲ್ಲಿ ಮುಂದಿದ್ದಳು. ಆರೋಪಿ ಯವತ್ತು ನನ್ನ ಮಗಳನ್ನು ಎಲ್ಲಿಗೂ ಕರೆದುಕೊಂಡು ಹೋಗಿಲ್ಲ , ಸುಳ್ಳು ಹೆಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯನ್ನು ನಾನು ಠಾಣೆಯಲ್ಲಿ ಬಿಟ್ಟು ಬೇರೆಲ್ಲೂ ನೋಡಿಲ್ಲ ಎಂದರೆ ಸರಿ. ಆರೋಪಿಯ ಬಗ್ಗೆ ನನಗೆ ಹಿಂದೆ ಮಾಹಿತಿ ಇರಲಿಲ್ಲ. ನನ್ನ ಮಗಳು ಕಾಣೆಯಾದ ಬಗ್ಗೆ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿ ನನ್ನ ಮಗಳ ಮೇಲೆ ಹಲ್ಲ ಮಾಡಿಲ್ಲ , ಅತ್ಯಾಚಾರ ಎಸಗಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ನನ್ನ ಮಗನಿಗೆ ಫೋನ್ ಮಾಡಿಯೇ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಹೇಳಿಕೊಟ್ಟ ಮೇರೆಗೆ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಹಿಂದು ಆಗಿದ್ದು ಆತನನ್ನು ಮತಾಂತರ ಮಾಡುವ ಉದ್ದೇಶದಿಂದ ಈ ರೀತಿ ಸುಳ್ಳು ಕೇಸು ಹಾಕಿ ಒತ್ತಡ ಹಾಕುತ್ತಿದ್ದೆವೇ ಎಂದರೆ ಸರಿಯಲ್ಲ. ಪೋಲಿಸರು ನನ್ನನು ವಿಚಾರಣೆ ಮಾಡಿಲ್ಲ.

**<u>ಮರು ವಿಚಾರಣೆಃ ..... ಇಲ್ಲ .....</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ12.08.2025 **(ಕೆ.ಎಂ.ರಾಜಶೇಖರ)**

ಸ್ಥಳಃ ಚಿಂತಾಮಣಿ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.